ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **09.01.2024**

ಪಾಟೀ ಸವಾಲುಃ ಶ್ರೀ ಹೆಚ್ ಸಿ ಎಂ ಕೆ ವಕೀಲರಿಂದ

ನಾನು ಬಿ ಕಾಂ ಪದವಿಧರನಾಗಿದ್ದು ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ . ಆರೋಪಿ ನನಗೆ 2-3 ವರುಷಗಳಿಂದ ಪರಿಚಯ . ದಿ 20-03-2021 ರಂದು ಆರೋಪಿ ಹಣ ಬೇಕೆಂದು ಕೇಳಿದ್ದು ಅದೇ ದಿನ ನಾನು ಅವರಿಗೆ ಹಣ ನೀಡಿದ್ದೇನೆ . ನಾನು ಆದಾಯ ತೆರಿಗೆ ಪಾವತಿ ದಾರ . ಆರೋಪಿಗೆ ನಾನು ನಮ್ಮ ಮನೆಯಲ್ಲಿಯೇ ಹಣ ನೀಡಿದ್ದು ಆ ಸಮಯದಲ್ಲಿ ಆರೋಪಿ ಮತ್ತು ನನ್ನನ್ನು ಹೊರತು ಪಡಿಸಿ ಅಲ್ಲಿ ಬೇರೆ ಯಾರು ಇರಲಿಲ್ಲ. ನನಗೆ ಯುನಿಯನ್ ಬ್ಯಾಂಕ್, ಎಸ್ ಬಿ ಐ ನಲ್ಲಿ ಖಾತೆ ಇದ್ದು ಮೊದಲು ಕಾರ್ಪೊರೇಷನ್ ಬ್ಯಾಂಕಿನಲ್ಲಿಯೂ ಖಾತೆ ಇತ್ತು . ಆರೋಪಿಗೆ ಹಣ ಖಾತೆಯ ಮೂಲಕ ನೀಡಲು ಯಾವುದಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ಬೆಳೆ ಮಾರಿ ಬಂದ ಹಣ ಮನೆಯಲ್ಲಿದ್ದು ನಾನು ಅದನ್ನು ಹಾಗೆ ನೀಡಿರುತ್ತೇನೆ ಎನ್ನುವರು . ನಾನು ಅಪಟೂರಿನಲ್ಲಿ ಜಮೀನನ್ನು ಬಾಡಿಗೆಗೆ ಪಡೆದು ಶುಂಠಿ ಬೆಳೆ ಬೆಳೆಯುತ್ತೇನೆ . ನಾನು ಎಷ್ಟು ಶುಂಠಿ ಮಾರಾಟ ಮಾಡಿದ್ದೇನೆ ಮತ್ತು ಎಷ್ಟು ಹಣ ಬಂತು ಎಂದು ನನಗೆ ಗೊತ್ತಿಲ್ಲ. ನಾನು ವ್ಯವಸಾಯ ಮಾಡಲು ಬಾಡಿಗೆಗೆ ಪಡೆದಿರುವ ಜಮೀನಿನ ಮಾಲೀಕರ ಹೆಸರು ನನಗೆ ಗೊತ್ತಿಲ್ಲ ಅದನ್ನು ಕರಾರಿನಲ್ಲಿ ನಮೂದಿಸಲಾಗಿದೆ . ಆರೋಪಿಗೆ ಸಾಲ ನೀಡಿರುವ ಬಗ್ಗೆ ವರಮಾನ ತೆರಿಗೆ ರೀಟರ್ನ್ಸ ನಲ್ಲಿ ತೋರಿಸಿರುವುದಿಲ್ಲ. ನಾನು ಎಲ್ಲಾ ವ್ಯವಹಾರಗಳನ್ನು ನಗದು ರೂಪದಲ್ಲಿ ಮಾಡುತ್ತೇನೆ .

ಆರೋಪಿ ಹಣವನ್ನು ವ್ಯಾಪಾರಕ್ಕಾಗಿ ಬೇಕೆಂದು ಕೇಳಿದ್ದು ತುರ್ತಾಗಿ ಬೇಕಾಗಿದ್ದರಿಂದ ಯಾವ ವ್ಯಾಪಾರ ಎಂದು ನಾನು ವಿಚಾರಿಸಿರಲಿಲ್ಲ. ನನ್ನ ಮತ್ತು ಆರೋಪಿಯ ನಡುವೆ ಈ ಮೊದಲು 7 ರಿಂದ 8 ಬಾರಿ ವ್ಯವಹಾರ ಆಗಿರುತ್ತದೆ. ಆರೋಪಿ ಎಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆದರೆ ಅವರು ಪೋಲಿಸ್ ಠಾಣೆಯ ಬಳಿ ವಾಸವಿರುವುದಾಗಿ ತಿಳಿದಿದೆ . ಅವರ ಮನೆಯಲ್ಲಿ ಯಾರು ಯಾರು ವಾಸವಾಗಿದ್ದಾರೆ

ಎಂದು ನನಗೆ ಗೊತ್ತಿಲ್ಲ. ಅರೋಪಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ. ಆರೋಪಿ ಶುಂಠಿ ವ್ಯಾಪಾರ ಮಾಡುತ್ತಾರೆ . ಶುಂಠಿಯನ್ನು ಜನವರಿಯಿಂದ - ಮೇ ವರೆಗೂ ಬಿತ್ತನೆ ಮಾಡಬಹುದು. ನಾನು ಆರೋಪಿಯ ಮನೆಗೆ ಹೋದಾಗ ಅವರ ಮನೆಯ ಹೆಸರು ಬೆಳಕು ಎಂದು ತಿಳಿದು ಬಂದಿರುತ್ತದೆ . ಉದ್ದೇಶ ಪೂರ್ವಕವಾಗಿ ಸಂಪೂರ್ಣ ವಿಳಾಸವನ್ನು ನೋಟಿಸ್ ಕವರ್ ಮೇಲೆ ಬರೆಯದೆ ನೋಟಿಸನ್ನು ಕಳುಹಿಸಲಾಗಿದೆ ಎಂದರೆ ಸರಿಯಲ್ಲ.

ಆರೋಪಿಗೂ ಮತ್ತು ನನಗೂ ಯಾವುದೇ ಹಣಕಾಸಿನ ವ್ಯವಹಾರ ಇಲ್ಲ ಎಂದರೆ ಸರಿಯಲ್ಲ. ನನ್ನಿಂದ ಅವರು ಯಾವುದೇ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ 1 ಎ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ನಿಪಿ 1 ಆರೋಪಿ ಹಾಗೂ ಆತನ ಹೆಂಡತಿಯ ಜಂಟಿ ಖಾತೆಗೆ ಸಂಬಂಧಿಸಿದ ಚೆಕ್ ಅಂದರೆ ಸಾಕ್ಷಿ ಆರೋಪಿಯೇ ಆ ಚೆಕ್‌ನ್ನು ಬರೆದು ನನ್ನ ಮುಂದೆ ಸಹಿ ಮಾಡಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ . ನಿಪಿ 1 ರಲ್ಲಿರುವ ಒಕ್ಕಣೆ ಹಾಗೂ ಸಹಿ ಬೇರೆ ಬೇರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ . ಆರೋಪಿ ಕನ್ನಡದಲ್ಲಿ ಸಹಿ ಮಾಡುತ್ತಾರೆ ನಿಪಿ 1 ಎ ಇಂಗ್ಲಿಷ್ ನಲ್ಲಿದ್ದು ಅದು ಅವರ ಸಹಿ ಅಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟಿ ಸವಾಲಿಗೆ ಆರೋಪಿ ಪರ ವಕೀಲರು ಸಮಯವಕಾಶ ಕೋರಿದ್ದು ನೀಡಲಾಯಿತು .

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರ ದ ನ್ಯಾ ದಂ, ಕುಶಾಲನಗರ

CC No. 967/21
PW-1

CC No. 967/21
PW-1